doc-587
T-P-2

Reg No B G 155 ೨ 14 11 72

In The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಮಹೋನ್ನತ
ಸರಮೇರಿಸಿದ
ದಿನಕ್ಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಶಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [೪ ನಯ

ಮುನಿಸಿಪಲ್ ಕಾಲೇಜುಗಳು ಸರ್ಕಾರಿ ವಶಕ್ಕೆ

ಏಷ್ಯನ್ನರನ್ನು ಹೊರದೂಡಲು ಕಾರಣ !

ವಾಷಿಂಗ್ಟನ್— ಯುಗಾಂಡಾ ಸರ್ವಾಧಿಕಾರಿ ಅಧ್ಯಕ್ಷ ಅಮಿನ್‌ರಿಗೆ (ಕೊರ್ಟ್ 4 ಮಂದಿ ಪತ್ನಿಯನರಿಗೆ ಅವಕಾಶವಿತ್ತಿದೆ) 7 ಜನ ಪತ್ನಿಯರನ್ನು ಹೊಂದಿದ್ದರೂ, ಅವರು ಅಲ್ಲಿಯ ಭಾರಿ ಶ್ರೀಮಂತ ಏಷ್ಯ ವಿಧವೆ ಪದ್ಮಿನಿಯನ್ನು ತನ್ನೊಡನೆ ಸೇರಲು ಕೇಳಿದರೆಂದೂ, ಆಕೆಯು ಧಿಕ್ಕರಿಸಿದಳೆಂದೂ, ಅದಕ್ಕಾಗಿ ಅಮಿನ್ ಏಷ್ಯನ್ನರ ಮೇಲೆ ವಿಷಕಾರುತ್ತಾ ಅವರನ್ನು ಹೊರದೂಡುತ್ತಿರುವದೆಂದೂ, ಯುಗಾಂಡ ಜೈಲಿನಲ್ಲಿ ನರಳಿ ಬಿಡುಗಡೆಗೊಂಡ ಬ್ರಿಟಿಷ್ ಪತ್ರಿಕೋದ್ಯೋಗಿ ಕ್ರಿಸ್ಟಫರ್ ಮುನಿರ್ಯ ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಬರೆದಿರುವ ಲೇಖನದಲ್ಲಿ ತಿಳಿಸಿರುವರು.

ತಮಿಳುನಾಡು ಪರಿಸ್ಥಿತಿ

ನವದೆಹಲಿ — ತಮಿಳುನಾಡುವಿನಲ್ಲಿಯ ಪರಿಸ್ಥಿತಿ ಬಗ್ಗೆ ಕೇಂದ್ರ ಸರಕಾರ ಅರಿತು ಕೊಳ್ಳುತ್ತಿತ್ತೆಯೆಂದೂ, ಸದ್ಯಕ್ಕೆ ಯಾವ ಸಾಚನೆಯೂ ಇಲ್ಲಿಂದ ಹೋಗುವಂತಿಲ್ಲವೆಂದೂ ಹೇಳಲಾಗಿದೆ

★

ನಾನು ಸಿ ಐ ಎ ಏಜೆಂಟ್

ನವದೆಹಲಿ— ಸ್ವತಂತ್ರ ಪಕ್ಷದ ಶ್ರೀ ಪಿಲ್ಲೂ ಮೋದಿ ಲೋಕಸಭೆಯಲ್ಲಿ "ನಾನು ಸಿ ಐ ಎ ಏಜೆಂಟ್" ಎಂಬ ಬ್ಯಾಡ್ಜ ಧರಿಸಿ ಕುಳಿತಿದ್ದರು ; ವಾಮು ವಿರೋಧ ಪಕ್ಷದ ಸದಸ್ಯರು ಇದಕ್ಕೆ ಆಕ್ಷೇಪಿಸಿದಾಗ ಸಭೆಯಲ್ಲಿ ಯಾವ ಬ್ಯಾಡ್ಜನ್ನು ಧರಿಸುವದೂ ಸರಿಯಲ್ಲವೆಂದು ತಿಳಿಸಿದರು.

○

ಬೆಲೆ ಏರಿಕೆ ವಿಚಾರವಲ್ಲಿ

ನವದೆಹಲಿ— ಬೆಲೆ ಏರಿಕೆ ಸಂಬಂಧದ ಆತುರದ ಸೂಚನೆಯನ್ನು ಲೋಕಸಭೆಯಲ್ಲಿ ಇಂದು ಚರ್ಚಿಸಲಾಗುವುದು.

ಚುನಾವಣೆ ನಡೆಸಲು ಸಲಹೆ

ಮದರಾಸು— ನಿನ್ನೆ ಪ್ರಾರಂಭವಾದ ಶಾಸನಸಭೆಯನ್ನು ಡಿಸೆಂಬರು 5ಕ್ಕೆ ಮುಂದುವರಿಸಿ, ಹೊಸ ಚುನಾವಣೆ ನಡೆಸಲು ಡಿಎಂಕೆ ಆಡಳಿತ ಪಕ್ಷಕ್ಕೆ ಶಾಸನಸಭಾ ಸ್ಪೀಕರರು ತಿಳಿಸಿದರು — ಈ ಸ್ಪೀಕರ್ ಶ್ರೀ ಮಾಥಿಯಲಗಂರ ಮೇಲೆ ಡಿಎಂಕೆ ಸದಸ್ಯರು ಅವಿಶ್ವಾಸ ಸೂಚನೆ ತಂದಿದ್ದಾರೆ.

★

ವೈನಾಡ್ ಬಂದ್

ಕಾಸಿಕೋಡು— ಕಾಫಿ ಬೆಲೆ ಹೆಚ್ಚಿಸಬೇಕೆಂದು ಒತ್ತಾಯ ಮಾಡಲು ಕೇರಳ ಕಾಫಿ ಬೆಳೆಗಾರರ ಕ್ರಿಯಾ ಸಮಿತಿ ಕರೆ ಕೊಟ್ಟದ್ದ 12 ಗಂಟೆಗಳ ವೈನಾಡ್ ಬಂದ್ ಯಶಸ್ವಿಯಾಗಿ ನಡೆಯಿತು.

★

ಹಗ್ಗದ ಕಾರ್ಖಾನೆಗಳು ಮುಚ್ಚಲ್ಪಟ್ಟವು

ಆಲಪ್ಪೆ — ಕೇರಳದಲ್ಲಿ 25000 ಕೆಲಸಗಾರರನ್ನು ಹೊಂದಿದ್ದ 4000 ಚಿಕ್ಕ ಪ್ರಮಾಣದ ಹಗ್ಗದ ಕಾರ್ಖಾನೆಗಳನ್ನು, ಬೆಲೆ ತಗ್ಗಿರುವದಕ್ಕಾಗಿ, ಈ ಸಂಬಂಧದ 9 ಸಂಸ್ಥೆಗಳ ಜಂಟಿ ಕ್ರಿಯಾ ಸಮಿತಿಯ ಆದೇಶದಂತೆ ಮುಚ್ಚಲಾಗಿದೆ.

○

ವಿದ್ಯಾರ್ಥಿಗಳ ಬಿಡುಗಡೆ

ಷಿಲ್ಲಾಂಗ್— ಭಾಷಾ ಗಲಭೆ ಸಂಬಂಧದಲ್ಲಿ ದಸ್ತಗಿರಿ ಮಾಡಲಾಗಿದ್ದ 43 ವಿದ್ಯಾರ್ಥಿಗಳ ಬಿಡುಗಡೆಗೆ ಸರ್ಕಾರ ಆಜ್ಞೆ ಮಾಡಿದೆ.

○

ಮಕ್ಕಳ ಸಮ್ಮೇಳನ

ಬಳ್ಳಾರಿ— 24 ನೇ ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನವು ಇಲ್ಲಿ ತಾ || 13 ರಿಂದ 16 ರವರೆಗೆ ನಡೆಯುವುದು

★

ಮುನಿಸಿಪಲ್ ಕಾಲೇಜುಗಳು

ಚಿಕ್ಕಬಳ್ಳಾಪುರ— ಮುನಿಸಿಪಲ್ ಕಾಲೇಜುಗಳನ್ನು ಸರಕಾರ ವಹಿಸಿಕೊಳ್ಳುವ ವಿಷಯ ತೀವ್ರ ಪರ್ಯಾಲೋಚನೆಯಲ್ಲಿದೆಯೆಂದು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರು ಮುನಿಸಿಪಲ್ ಕಾಲೇಜಿನ ಶಂಕು ಸ್ಥಾಪಿಸುತ್ತಾ ಹೇಳಿದರು.

★

ಸಕ್ಕರೆ ಬೆಲೆ

ನವದೆಹಲಿ— ಸಕ್ಕರೆ ಲೆವಿ ಬೆಲೆಯನ್ನು ಕಿಲೋಗೆ 20 ಪೈಸೆ ಹೆಚ್ಚಿಸಿರುವದಕ್ಕೆ ಸರಕಾರವನ್ನು ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿಯಲ್ಲಿ ತೀವ್ರ ಆಕ್ಷೇಪಿಸಲಾಯಿತು — ಹೆಚ್ಚಿಸದಿದ್ದಿದ್ದರೆ ಸಕ್ಕರೆ ಗಿರಿಣಿಯವರು ಭಾರ್ಗವ ಕಮಿಟಿ ವರದಿಯ ಆಧಾರದ ಮೇಲೆ ಬೆಲೆ ಹೆಚ್ಚಿಸಲು ಕೋರ್ಟಿಗೆ ಹೋಗುತ್ತಿದ್ದರೆಂದು ವ್ಯವಸಾಯ ಮಂತ್ರಿ ಶ್ರೀ ಅಹಮದ್ ಹೇಳಿದರು.

○

ಸಕ್ಕರೆ ಮಾರಾಟ

ನವದೆಹಲಿ— ಬಹಿರಂಗ ವಹಾರುಕಟ್ಟೆಯಲ್ಲಿ ಸಕ್ಕರೆ ಮಾರಾಟ ವಜಾಮಾಡುವ ಯೋಜನೆ ಸರ್ಕಾರಕ್ಕಿಲ್ಲವೆಂದು ಲೋಕ ಸಭೆಯಲ್ಲಿ ತಿಳಿಸಲಾಯಿತು.

●

ಮಕ್ಕಳ ಜನಸಂಖ್ಯೆ

1958 ರಲ್ಲಿ ದೇಶದಲ್ಲಿ ಮಕ್ಕಳ ಜನಸಂಖ್ಯೆ ಶೇಕಡ 40 ರಷ್ಟು ಇದ್ದುದು ಈಗ 60 ರಷ್ಟಾಗಿದ್ದರೂ ಅವರ ಬಗ್ಗೆ ಸರಿಯಾದ ನೀತಿಯು ಅನುಸರಣೆ ಇಲ್ಲವೆನ್ನಲಾಗಿದೆ.

●

ಮೈಸೂರು— ಲಷ್ಕರ್ ಮೊಹಲ್ಲಾದಲ್ಲಿ ಒಂದು ಮನೆ ಶೋಧಿಸಿ ಪೋಲೀಸರು ರೂ. 5000 ಬೆಲೆಯ ಗಂಧದಮರದ ಚಕ್ಕೆಯನ್ನು ವಶಪಡಿಸಿಕೊಂಡು ಒಬ್ಬನನ್ನು ದಸ್ತಗಿರಿ ಮಾಡಿದೆ.

ಬಡವರು ಬಡವರಾಗಿಯೇ ಇದ್ದಾರೆ

ನಾಗರಕೋಯಿಲ್— 4 ಯೋಜನೆಗೆಳಿಗೆ ರೂ. 50000 ಕೋಟಿ ಖರ್ಚಾಗಿರುವ ನಂತರವೂ ದೇಶದಲ್ಲಿ ಬಡವರಾಗಿಯೇ ಇದಾರೆ ಎಂದು ಹಳೇ ಕಾಂಗ್ರೆಸ್ ನಾಯಕ ಶ್ರೀ ಕಾಮರಾಜರು ಹೇಳಿದರು.

★

ಮೈಸೂರು ರಾಜ್ಯದ ಕೇಳಿಕೆ

ನವದೆಹಲಿ— ಮೈಸೂರು ರಾಜ್ಯದ ಉತ್ತರ ಭಾಗಗಳಿಗೆ ಹೆಚ್ಚು ಪ್ರಯೋಜನಕಾರಿಯಾದ ಕೃಷ್ಣ-ಮೇಲ್ದಂಡೆ ಮಲಪ್ರಭಾ, ಘಟಪ್ರಭಾಗಳ ನೂರು ಹಿರಿಯ ನೀರಾವರಿ ಪ್ರಾಜೆಕ್ಟುಗಳನ್ನು ಮುಗಿಸಲು ಮೈಸೂರು ರಾಜ್ಯವು ಕೇಂದ್ರವನ್ನು ರೂ. 90 ಕೋಟಿ ಕೇಳಿದೆಯೆನ್ನಲಾಗಿದೆ

★

ಅಂತರ್ರಾಷ್ಟ್ರೀಯ ಮಹಿಳಾ ವರ್ಷ

ವಾಷಿಂಗ್ಟನ್— 1975 ನೇ ವರ್ಷವನ್ನು 'ಅಂತರ್ರಾಷ್ಟ್ರೀಯ ಮಹಿಳಾ ವರ್ಷ" ವಾಗಿ ಎಣಿಸಲು ವಿಶ್ವಸಂಸ್ಥೆ ಜನರಲ್ ಅಸೆಂಬ್ಲಿಯ ಸಾಮಾಜಿಕ, ಮಾನವೀಯ ಮತ್ತು ಸಾಂಸ್ಕೃತಿಕ ಸಭೆ ಮತ ನೀಡಿದೆ.

○

ಮೇಳಾಕ್ಕೆ ದಾಖಲಾತಿ ಪ್ರೇಕ್ಷಕರು

ನವದೆಹಲಿ— ಭಾನುವಾರ ವಿಶ್ವಾಮೇಳಾಕ್ಕೆ ದಾಖಲಾತಿಯಷ್ಟು ಪ್ರೇಕ್ಷಕರು ಬಂದಿದ್ದರು — ಮಧ್ಯಾಹ್ನಕ್ಕೆ ಮುಂಚೆಯೇ 200000 ಲಕ್ಷ ಜನ ಬಂದಿದ್ದು, ನಂತರ ಸಂಜೆವರೆಗೆ 1 ಲಕ್ಷಕ್ಕೂ ಹೆಚ್ಚು ಮಂದಿ ಬರುವ ನಿರೀಕ್ಷೆ ಇತ್ತು. ತಾ || 3 ರಿಂದ ಇಲ್ಲೀವರೆಗೆ 15 ಲಕ್ಷ ಜನ ನೋಡಿ ಆನಂದಿಸಿರುವರು.

● ಜನತೆ ತಪ್ಪು ಮಾಡಿದಾಗ ಅದು ಸೋತವೇ ಹೊರತು ಆಪರಾಧವಲ್ಲ.

— ವಿಷ್ಟಂಡ್ ಬರ್ಕ್

ಕರ್ನಾಟಕ ಕೀರ್ತನಕಾರರ ಸಮ್ಮೇಳನ

ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಈ ವರ್ಷದ ಡಿಸೆಂಬರ್ ಕಡೆಯ ವಾರದಲ್ಲಿ ಕರ್ನಾಟಕ ಕೀರ್ತನಕಾರರ ಸಮ್ಮೇಳನವು ಬೆಂಗಳೂರಿನಲ್ಲಿ ನಡೆಯಲಿದೆ.

ಈ ಸಮ್ಮೇಳನದಲ್ಲಿ ಭಾಗವಹಿಸಲು ಇಚ್ಛಿಸುವ ಕೀರ್ತನಕಾರರು ಸಮ್ಮೇಳನದಲ್ಲಿ ಚರ್ಚಿಸಬಹುದಾದ ವಿಷಯಗಳನ್ನೂ, ತಮ್ಮ ಹೆಸರು ವಿಳಾಸಗಳನ್ನೂ, ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 18, ಈ ವಿಳಾಸಕ್ಕೆ ಕೂಡಲೇ ಕಳುಹಿಸಿಕೊಡಬೇಕಲ್ಲದೆ, ನಾಡಿನಲ್ಲಿ ತಮಗೆ ಗೊತ್ತಿರುವ ಇತರ ಕೀರ್ತನಕಾರರ ವಿಳಾಸಗಳನ್ನೂ ಕಳಿಸಿಕೊಡಲಾಗಿ ಕೋರಲಾಗಿದೆ

ವುಡ್‌ಲಾಂಡ್ಸ್ ಅಮೋಘ 7 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ 10-30 ಮೇಯರ್ ಮುತ್ತಣ್ಣ

ಅಪೂರ್ವ 5 ನೇ ವಾರ

ಬಾಂಧವ್ಯ

ಪಾತ್ರ – ಅಶ್ವತ್ಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪಂಡರೀಬಾಯಿ,

ಸಂಧ್ಯಾರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸುಳ್ಳಿನ' ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

—ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ ರವರ ಜೊಚ್ಚಲು ಚಿತ್ರ

ಆನೆ – ಹುಡುಗ

ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ

Edited Printedand Published by Dharmapracharanirata M S Krishna Rao (Propretor) at the Satvavad Press, Chamarajapuram Mysore

ಮೈಸೂರು ದಸರಾ ವಸ್ತುಪ್ರದರ್ಶನ
ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 15-11-1972 ಬುಧವಾರ

ಕಲಾಕ್ಷೇತ್ರ

6 ರಿಂದ 7 ಸಂಜೆ	ಶ್ರೀಮತಿ ಕೆ. ವಿ. ನಾಗವಲ್ಲಿ, ಮೈಸೂರು	ಸಂಗೀತ
7 ರಿಂದ 9-30	ಶ್ರೀ ಶ್ರೀಕಂಠೇಶ್ವರ ನಾಟಕ ಮಂಡಳಿ, ನಂಜನಗೂಡು	ನಾಟಕ "ಬೇಡರ ಕಣ್ಣಪ್ಪ"

ಜೀವನರಾಯನಕಟ್ಟೆ

6 ರಿಂದ 7	ಶ್ರೀ ವೀರಯ್ಯ, ಮೈಸೂರು,	ಕಾವ್ಯವಾಚನ
7 ರಿಂದ 8-30	ಶ್ರೀ ವಿ. ವೆಂಕಟಸುಬ್ಬರಾವ್, ಬೆಂಗಳೂರು	ವೀಣೆ
8-30 ರಿಂದ 9-30	ಶ್ರೀ ಮಾದಪ್ಪ, ಮೈಸೂರು	ಲಾವಣಿ

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

SHAKTI
SUDHA

A Superb Tonic

Help The Gorakshana

—Humanitarian Propoganda Monthly....

Protect the Cow–

For Mosquito Nets in all sizes Visit Bank Road Bahusar, Mysore